ಸ್ಥಳ. ಅತ್ಯುತ್ತಮ ಸಾಧನೆಗಳಿಗೆ ದೊಡ್ಡ ವೇದಿಕೆ ಒದಗಿಸಿಕೊಟ್ಟ ಲಾಸ್ ಏಂಜಲೀಸ್ ಕ್ರೀಡಾಕೂಟಕ್ಕೆ ಇದ್ದಿದ್ದು ಅಮೆರಿಕದ ಪ್ರಜಾಪ್ರಭುತ್ವದ ಹಿನ್ನೆಲೆ. ಇದರ ನಂತರದ ಒಲಿಂಪಿಕ್ಸ್ ಜರುಗಿದ್ದು ಜರ್ಮನಿಯ ಬರ್ಲಿನ್‌ನಲ್ಲಿ. ಅಲ್ಲಿ ಇದ್ದಿದ್ದು ಸರ್ವಾಧಿಕಾರ. ಸರ್ವಾಧಿಕಾರಿ ಅಡೋಲ್ಫ್ ಹಿಟ್ಲರ್‌ನ ಬಿಗಿಮುಷ್ಟಿಯಲ್ಲಿ ಈ ಒಲಿಂಪಿಕ್ಸ್ ಕ್ರೀಡಾಕೂಟ ನಡೆಯಿತು.

ಆರ್ಯಕುಲವೇ ಎಲ್ಲಕ್ಕಿಂತ ಶ್ರೇಷ್ಠ ಎಂಬುದನ್ನು ಸಾಬೀತು ಪಡಿಸುವ ಛಲದಿಂದ ಬರ್ಲಿನ್ ಕೂಟವನ್ನು ಸಿದ್ಧಗೊಳಿಸಿದ್ದ ಹಿಟ್ಲರ್. ಜೊತೆಗೆ ಜರ್ಮನಿ ಜಾಗತಿಕ ವಲಯಗಳಲ್ಲಿ ಪ್ರತಿಷ್ಠೆ ಗಳಿಸಬೇಕೆಂಬುದು ಹಿಟ್ಲರ್‌ನ ಇನ್ನೊಂದು ಮಹತ್ವಾಕಾಂಕ್ಷೆಯಾಗಿತ್ತು. ಹೀಗಾಗಿ ಬರ್ಲಿನ್ ಕೂಟ ಗುಣಮಟ್ಟದಿಂದ ಕೂಡಿರಲು ಎಲ್ಲಾ ವ್ಯವಸ್ಥೆ ಇತ್ತು. ಕ್ರೀಡಾಂಗಣಗಳ ನಿರ್ಮಾಣ, ಆಧುನಿಕ ಉಪಕರಣಗಳ ಅಳವಡಿಕೆ, ಕ್ರೀಡಾಪಟುಗಳಿಗೆ ತಂಗುದಾಣ, ಸಂಚಾರ ವ್ಯವಸ್ಥೆ– ಹೀಗೆ ಯಾವುದರಲ್ಲೂ ಕೊರತೆ ಇರಲಿಲ್ಲ.

ಸರ್ವ ಶ್ರೇಷ್ಠವಾಗಿ ಸಿದ್ಧಗೊಂಡ ಬರ್ಲಿನ್ ಕೂಟದಲ್ಲಿ ಕಪ್ಪುಚುಕ್ಕೆ ಎಂಬಂತೆ ನಿಗ್ರೋ ಹಾಗೂ ಯಹೂದಿ ಕ್ರೀಡಾಪಟುಗಳಿಗೆ ಪ್ರವೇಶ ನೀಡಬಾರದೆಂಬ ಒಳ ಆಸೆಯೂ ಹಿಟ್ಲರ್‌ಗೆ ಇದ್ದಿದ್ದು ಎಲ್ಲರಿಗೂ ಗೊತ್ತಿತ್ತು. ಇದು ಎಲ್ಲೆಡೆ ಸುದ್ದಿಯಾಗಿ ಹರಿದಾಡುತ್ತಿದ್ದರೂ ಬಹಿರಂಗಗೊಂಡಿರಲಿಲ್ಲ.

ಈ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆದಿರುವಾಗಲೇ ಅಮೆರಿಕ ಹಾಗೂ ಆಫ್ರಿಕದ ಕ್ರೀಡಾಪಟುಗಳು ತಮ್ಮ ಸಾಮಾರ್ಥ್ಯ ಪ್ರದರ್ಶಿಸಲು ಆರಂಭಿಸಿದ್ದರು. ವಿಶ್ವಮಟ್ಟದ ದಾಖಲೆಗಳಿಗೆ ಸೆಡ್ಡು ಹೊಡೆಯುವ ಪ್ರಯತ್ನಗಳು ಮೇಲ್ನೋಟಕ್ಕೆ ಕಂಡುಬರುತ್ತಿದ್ದವು. ಅಂತಹ ಪ್ರತಿಭಾವಂತರ ಸಾಲಿನಲ್ಲಿ ಮೊದಲಿಗೆ ಕಾಣಿಸಿಕೊಂಡವರೇ ಜೆಸ್ಸಿ ಓವೆನ್ಸ್.

ಅಮೆರಿಕದಲ್ಲಿ ಕರಿಯರ ಬದುಕು ದಾರುಣ ಸ್ಥಿತಿಯಲ್ಲಿದ್ದ ಕಾಲಘಟ್ಟ ಅದು. ವರ್ಣಭೇದದ ಕಾವು ದೇಶದ ತುಂಬಾ ಇತ್ತು. ಎಲ್ಲಾ ವಿಷಯಗಳಲ್ಲೂ ಕರಿಯರನ್ನು ಅವಮಾನಿಸುವುದು, ಅವರನ್ನು ಗುಲಾಮರಂತೆ ನಡೆಸಿಕೊಳ್ಳುವುದು ಸರ್ವೇಸಾಮಾನ್ಯವಾಗಿದ್ದ ಸಮಯ ಅದು.

ಕಪ್ಪು ಜನರು ಕಷ್ಟದ ವಾತಾವರಣದಲ್ಲಿ ದಿನ ದೂಡುವ ಸಂದರ್ಭದಲ್ಲಿ ಕ್ರೀಡಾ ಕಣ್ಮಣಿಯಾಗಿ ಮೇಲೆದ್ದವರು ಜೆಸ್ಸಿ ಓವೆನ್ಸ್. ದೇಶದ ತುಂಬಾ ಅವರದೇ ಮಾತು. ದಾಖಲೆಗಳ ಮೇಲೆ ದಾಖಲೆ ಮುರಿಯುತ್ತಿದ್ದ ಓವೆನ್ಸ್ ಕ್ರೀಡಾ ಮೈದಾನದ ಕೇಂದ್ರ ಬಿಂದುವಾದರು. ಅಮೆರಿಕದ ಕ್ರೀಡಾಕ್ಷೇತ್ರದಲ್ಲಿ ಸಂಚಲನ ಮೂಡಿಸಿದ ಜೆಸ್ಸಿ ಅಂತರರಾಷ್ಟ್ರೀಯ ಮಟ್ಟದಲ್ಲೂ ಮಿಂಚುವ ಎಲ್ಲಾ ಸಾಧ್ಯತೆಗಳನ್ನು ತೋರತೊಡಗಿದಾಗ ಎಲ್ಲರ ಕಣ್ಣು ಅವರ ಮೇಲೆ ಬಿದ್ದಿದ್ದು ಸಹಜ ಕೂಡ.

ಕ್ಲೀವ್ ಲ್ಯಾಂಡ್‌ನಲ್ಲಿ ಹೈಸ್ಕೂಲಿನಲ್ಲಿ ಓದುವಾಗಲೇ ಲಾಂಗ್ ಜಂಪ್, 100 ಮೀಟರ್ ಹಾಗೂ 200 ಓಟದ ಸ್ಪರ್ಧೆಗಳಲ್ಲಿ ರಾಷ್ಟ್ರೀಯ ದಾಖಲೆಗಳನ್ನು ಸರಿಗಟ್ಟುವಲ್ಲಿ ಯಶಸ್ವಿಯಾಗಿದ್ದರು ಜೆಸ್ಸಿ ಓವೆನ್ಸ್. ಆಗವರು ಪಾಲ್ಗೊಂಡ ಎಲ್ಲಾ 42 ಸ್ಪರ್ಧೆಗಳಲ್ಲೂ ಮೊದಲ ಸ್ಥಾನವನ್ನು ಯಾರಿಗೂ ಬಿಟ್ಟುಕೊಟ್ಟಿರಲಿಲ್ಲ.

1913ರ ಸೆಪ್ಟೆಂಬರ್ 13 ರಂದು ಓಕ್‌ವಿಲ್ಲೆ ಅಲ್ಬಾಮದ ಕಡು ಬಡತನದ ಕರಿಯರ ಕುಟುಂಬದಲ್ಲಿ ಹುಟ್ಟಿದ್ದ ಓವೆನ್ಸ್ ಏಳನೇ ವಯಸ್ಸಿಗೆ ಪ್ರತಿದಿನ ಪೌಂಡುಗಟ್ಟಲೆ ಹತ್ತಿ ಬಿಡಿಸುತ್ತ ಮನೆ ಮಂದಿಯ ತುತ್ತಿನ ಚೀಲ ತುಂಬಿಸುವಲ್ಲಿ ನೆರವಾಗುತ್ತಿದ್ದರು. ದಕ್ಷಿಣ ಅಮೆರಿಕದಲ್ಲಿದ್ದ ಹದಿನೈದು ಲಕ್ಷ ಆಫ್ರಿಕನ್ ಅಮೆರಿಕನ್ನರು ಉತ್ತಮ ಜೀವನಕ್ಕಾಗಿ ಉತ್ತರ ಅಮೆರಿಕಕ್ಕೆ ವಲಸೆ